7

# ದಾವೀದನೊಂದಿಗೆ ದೇವರ ಒಡಂಬಡಿಕೆ

*“ಇಸ್ರಾಯೇಲ್ ಜನರ ದೇವರಾಗಿರುವ ಕರ್ತನಿಗೆ ಸ್ತೋತ್ರವು. ... ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನುಂಟು ಮಾಡಿದ್ದಾನೆ; ತನ್ನ ಸೇವಕನಾದ ದಾವೀದನ ಮನೆತನದಲ್ಲಿ ನಮಗೋಸ್ಕರ ಒಬ್ಬ ರಕ್ಷಣವೀರನನ್ನು ಎಬ್ಬಿಸಿದ್ದಾನೆ. ... ನಮ್ಮ ಪಿತೃಗಳಿಗೆ ದಯೆಯನ್ನು ತೋರಿಸುವವನಾಗಿಯೂ ... ತನ್ನ ಪರಿಶುದ್ಧ ವಾದ ಒಡಂಬಡಿಕೆಯನ್ನು ನೆನಸಿಕೊಳ್ಳುವವನಾಗಿಯೂ ಇದ್ದನು ...” (ಲೂಕ 1:68-75).*

ದೇವರು ದಾವೀದನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು, ಯೇಸುವು ನೆರವೇರಿಸಿದ ವಾಗ್ದಾನವನ್ನು ಅದು ಒಳಗೊಂಡಿತ್ತು. ತನ್ನ ಜೀವನದ ಅಂತ್ಯದಲ್ಲಿ ದಾವೀದನು ದೇವರು ತನ್ನೊಂದಿಗೆ ಈ ಒಡಂಬಡಿಕೆಯನ್ನು ಮಾಡಿದ್ದಾನೆಂದು ಹೇಳಿದನು (2 ಸಮುವೇಲ 23:5). ಯೆಹೂದ ರಾಜ್ಯದ ಚರಿತ್ರೆಯಲ್ಲಿಯ ಕುಂಗುತ್ತಿದ್ದ ಅವಧಿಯ ವಿವರಣೆಯಲ್ಲಿ 2 ಪೂರ್ವಕಾಲವೃತ್ತಾಂತ 21:7ರಲ್ಲಿ ಸಹ ಇದು ನಮೂದಿಸಲ್ಪಟ್ಟಿದೆ. ಒಡಂಬಡಿಕೆಯನ್ನು ಕುರಿತು ದೇವರ ಹೇಳಿಕೆಯನ್ನು ದಾವೀದನು ಕೀರ್ತನೆ 89ರಲ್ಲಿ ದಾಖಲೆ ಮಾಡಿದ್ದಾನೆ:

> “ನಾನು ಆರಿಸಿಕೊಂಡ ಸೇವಕನಾದ ದಾವೀದನ ಸಂಗಡ ಒಡಂಬಡಿಕೆ ಮಾಡಿಕೊಂಡು ಆಣೆಯಿಟ್ಟು - ಶಾಶ್ವತವಾಗಿ ನಿನ್ನ ಸಂತತಿಯನ್ನು ಸ್ಥಾಪಿಸುವೆನು, ತಲತಲಾಂತರಗಳಿಗೂ ನಿನ್ನ ಸಿಂಹಾಸನವನ್ನು ಸ್ಥಿರಪಡಿಸುವೆನು ಎಂದು ಹೇಳಿದ್ದೇನೆ” (ವಚನ 3).

> “ನನ್ನ ಕೃಪೆಯು ಅವನಲ್ಲಿ ಶಾಶ್ವತವಾಗಿ ಇರುವದು; ನನ್ನ ಒಡಂಬಡಿಕೆಯು ಅವನಲ್ಲಿ ಸ್ಥಿರವಾಗಿರುವದು. ಅವನ ಸಂತಾನವನ್ನು ಯಾವಾಗಲೂ ಉಳಿಸುವೆನು, ಅವನ ಸಿಂಹಾಸನವು ಆಕಾಶವಿರುವ ವರೆಗೂ ಇರುವದು” (ವಚನಗಳು 28, 29).

> “ನನ್ನ ಒಡಂಬಡಿಕೆಯನ್ನು ಭಂಗಪಡಿಸುವದಿಲ್ಲ; ನನ್ನ ಮಾತನ್ನು ಬದಲಿಸುವದಿಲ್ಲ, ನನ್ನ ಪವಿತ್ರತ್ವದಲ್ಲಿ ಆಣೆಯಿಟ್ಟು ಒಂದು ಸಂಗತಿ ಹೇಳಿದ್ದೇನೆ; ಅದರ ವಿಷಯ ದಾವೀದನಿಗೆ ಸುಳ್ಳುಗಾರನಾಗುವದಿಲ್ಲ. ಅದೇನಂದರೆ - ಅವನ ಸಂತತಿಯು ಶಾಶ್ವತವಾಗಿ ಇರುವುದು. ಅವನ ಸಿಂಹಾಸನವು ಸೂರ್ಯನಂತೆ ನನ್ನ ಎದುರಿನಲ್ಲಿ ಇರುವುದು” (ವಚನಗಳು 34-36).

ದಾವೀದನ ರಾಜ್ಯದ ಶಾಶ್ವತವಾಗಿರುವ ಲಕ್ಷಣದ ಬಗ್ಗೆ ನಾತಾನನು ದಾವೀದನಿಗೆ ಭರವಸೆ ಕೊಟ್ಟಿದ್ದನು (2 ಸಮುವೇಲ 7:13, 16). ಆಳಿಕೆ ಮಾಡುವಾತನು ಬೇತ್ಲೆಹೇಮಿನೊಳಗಿಂದ ಬರುವನು ಎಂದು ಮೀಕನು ಪ್ರವಾದನೆ ಹೇಳಿದ್ದನು (ಮೀಕ 5:2).

ದಾನಿಯೇಲನು ಮನುಷ್ಯ ಕುಮಾರನು ಮಹಾವೃದ್ಧನ ಬಳಿಗೆ ಏರಿಹೋಗಿ ಆತನಿಂದ ಶಾಶ್ವತ ರಾಜ್ಯವನ್ನು ಪಡೆದುಕೊಂಡ ದರ್ಶನವನ್ನು ಕಂಡನು (ದಾನಿಯೇಲ 7:13, 14). ದಾವೀದನ ಸಿಂಹಾಸನದ ಮೇಲೆ ಕುಳುತು ಕೊಳ್ಳುವ ಆಡಳಿತೆಗಾರನ ಬಗ್ಗೆ ಯೆಶಾಯನು ಮಾತಾಡಿದನು (ಯೆಶಾಯ 9:6, 7).

ಯೆಹೂದಿ ಗೋತ್ರದವನಾದ ದಾವೀದನ ವಂಶಜನಾದ, ಯೇಸುವಿನಲ್ಲಿ ಈ ಪ್ರವಾದನೆಗಳು ನೆರವೇರಿದವು, ತನ್ನ ಮಕ್ಕಳನ್ನು ಆಶೀರ್ವದಿಸುವದರಲ್ಲಿ, ಯಾಕೋಬನು ಯೆಹೂದನ ಕೈಯಿಂದ ರಾಜ ದಂಡವು ತಪ್ಪುವುದೇ ಇಲ್ಲವೆಂದು ಪ್ರವಾದನೆ ಹೇಳಿದನು (ಆದಿಕಾಂಡ 49:10). ದಾವೀದನಿಗೆ ಸಂಬಂಧಿಸಿ ಇತರ ಪ್ರವಾದನೆಗಳು ದೇವರ ಜನಾಂಗದ[1] ಮೇಲೆ ದಾವೀದನು ಆಳಿದಂತೆ - ಆಳಿಕೆ ಮಾಡಲು ದಾವೀದನ ಸಂತತಿಯವರು ಬರುವರು ಎಂದು ಸೂಚಿಸಿದವು.

ಯೇಸುವನ್ನು ಕುರಿತಾಗಿ ಮರಿಯಳಿಗೆ ತನ್ನ ತಿಳಿಸುವಿಕೆಯಲ್ಲಿ ಯೇಸುವಿಗೆ ಈ ಪ್ರವಾದನೆಗಳನ್ನು ಗಬ್ರಿಯೇಲ ದೇವದೂತನು ಸಂಬಂಧಿಸಿದನು: " 'ಆತನು ಮಹಾ ಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ' "(ಲೂಕ 1:32, 33).

ಯೇಸುವು ತಂದೆಯ ಬಲಪಾರ್ಶ್ವಕ್ಕೆ ಏರಿಹೋಗಿ, ಎಲ್ಲಾ ಸಂಗತಿಗಳು ಆತನ ಪಾದಗಳ ಕೆಳಗೆ ಹಾಕಲ್ಪಟ್ಟಾಗ[2] ಇದೆಲ್ಲವೂ ನೆರವೇರಿತು. ಅಂದಿನಿಂದ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಯೇಸುವಿಗೆ ಎಲ್ಲಾ ಅಧಿಕಾರವಿರುವುದು (ಮತ್ತಾಯ 28:18). ತಮ್ಮ ಪಾಪಗಳ ಕ್ಷಮಾಪಣೆಯನ್ನು ಹೊಂದಿದವರು ಯೇಸುವಿನ ರಾಜ್ಯದೊಳಗೆ ಪ್ರವೇಶಿಸಲು ಕತ್ತಲೆಯ ಮತ್ತು ಸೈತಾನನ ದೊರೆತನದಿಂದ ಬಿಡುಗಡೆ ಮಾಡಲ್ಪಟ್ಟಿದ್ದಾರೆ (ಅಪೊಸ್ತಲರ ಕೃತ್ಯಗಳು 2:38; 26:18; ಕೊಲೊಸ್ಸೆ 1:13).

ಯೇಸುವು ಮೆಸ್ಸೀಯನು, ಕ್ರಿಸ್ತನು ಆಗಿದ್ದಾನೆ (ಯೋಹಾನ 1:41; ಅಪೊಸ್ತಲರ ಕೃತ್ಯಗಳು 2:36). ಈಗ ಆತನು ಆಳುತ್ತಿರುವದರಿಂದ, ನಾವು ಆತನಿಗೆ ವಿಧೇಯರಾಗ ಬೇಕು, ಇಲ್ಲದಿದ್ದರೆ ನಾವು ನಾಶಗೊಳಿಸಲ್ಪಡುವೆವು (ಅಪೊಸ್ತಲರ ಕೃತ್ಯಗಳು 3:23).

ದೇವರು ದಾವೀದನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ಯೇಸುವಿನಲ್ಲಿ ನೆರವೇರಿತು. ಈ ಒಡಂಬಡಿಕೆಯ ಪ್ರಕಾರವಾಗಿ ದಾವೀದನ ಸಿಂಹಾಸನದ ಮೇಲೆ ಕುಳಿತು ಕೊಳ್ಳಲು ಮತ್ತು ದೇವರ ಜನಾಂಗದ ಮೇಲೆ ಆಳಿಕೆ ನಡಿಸಲು ದೇವರು ಆಡಳಿತೆ ಮಾಡುವಾತನನ್ನು, ಯೇಸುವನ್ನು ದೇವರು ತಂದನು. ಯೇಸುವನ್ನು ಕಳುಹಿಸುವಲ್ಲಿ, ದಾವೀದನೊಂದಿಗಿನ ತನ್ನ ಒಡಂಬಡಿಕೆಯನ್ನು ದೇವರು ಕೈಕೊಂಡಿದ್ದಾನೆ.

ಟಿಪ್ಪಣಿಗಳು

[1]ನೋಡಿರಿ. ಯೆರೆಮೀಯ 23:5; 30:9; 33:15; ಯೆಹೆಜ್ಕೇಲ 34:23, 24; 37:24, 25; ಹೋಶೇಯ 3:5; ಜೆಕರ್ಯ 12:10. [2]ನೋಡಿರಿ. ಮಾರ್ಕ 16:19; ಅಪೊಸ್ತಲರ ಕೃತ್ಯಗಳು 2:34, 35; 1 ಕೊರಿಂಥ 15:27; ಎಫೆಸ 1:19-23; 1 ಪೇತ್ರ 3:22.

© 2009 Truth for Today